# Question Paper – 2018

## (Paper– I)

**ಅಧಿಸೂಚನೆ ಸಂಖ್ಯೆ : 75/ನೇಮಕಾತಿ – 2/2018-19, ದಿನಾಂಕ : 7-6-2018**

Maximum Marks : 50

ಗರಿಷ್ಠ ಅಂಕಗಳು : 50

Time : 90 Minutes

ಸಮಯ : 90 ನಿಮಿಷಗಳು

1. **Write an essay on any one of the following topics in not more than 600 words. If the essay exceeds word limit, marks will be deducted :** **20**

**ಈ ಕೆಳಕಂಡ ಯಾವುದಾದರೂ ಒಂದು ವಿಷಯದ ಕುರಿತಂತೆ 600 ಪದ ಮೀರದಂತೆ ಪ್ರಬಂಧ ಬರೆಯಿರಿ. ಪದಗಳ ಗರಿಷ್ಠ ಮಿತಿ ಮೀರಿದರೆ ಅಂಕ ಕಡಿತಗೊಳಿಸಲಾಗುವುದು :**

a) Role of women's self help groups in the economic development of rural women.
ಗ್ರಾಮೀಣ ಮಹಿಳೆಯರ ಆರ್ಥಿಕಾಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ.

b) Welfare measures in police department.
ಪೋಲಿಸ್ ಇಲಾಖೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳು.

c) State Intelligence Department and Intelligence Bureau (I.B.) coordination and challenges.
ರಾಜ್ಯ ಗುಪ್ತಚರ ಇಲಾಖೆ ಮತ್ತು ಇಂಟೆಲಿಜೆನ್ಸ್ ಬ್ಯೂರೋ (ಐ.ಬಿ.) ಇದರ ಸಮನ್ವಯತೆ ಮತ್ತು ಸವಾಲುಗಳು.

d) Role of youth in strengthening Democracy.
ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಯುವ ಜನರ ಪಾತ್ರ.

e) Global warming-cause and effects. Discuss.
ಜಾಗತಿಕ ತಾಪಮಾನದ ಕಾರಣ ಮತ್ತು ಪರಿಣಾಮಗಳನ್ನು ಚರ್ಚಿಸಿ.

2. **Translate the following passage into English :** **10**

**ಈ ಕೆಳಕಂಡ ಖಂಡಿಕೆಯನ್ನು ಆಂಗ್ಲಭಾಷೆಗೆ ಭಾಷಾಂತರ ಮಾಡಿರಿ :**

ಲಿಂಗ ತಾರತಮ್ಯಗಳಿಗೆ ಪುರುಷರ ಪಾಲುದಾರಿಕೆ ಇರುವುದು ಸ್ಪಷ್ಟವಾಗಿದ್ದು ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯನ್ನು ಬೌದ್ಧಿಕವಾಗಿ ಮತ್ತು ಸಾಮಾಜಿಕವಾಗಿ ವಿಕಸನಗೊಂಡ ವ್ಯಕ್ತಿಯನ್ನಾಗಿಸಲು ಕೈ ಸೇರಿಸದ ಪುರುಷ ಆಕೆಯನ್ನು ತನ್ನ ಅಧೀನದಲ್ಲಿರುವಂತೆ ನೋಡಿಕೊಂಡಿದ್ದಾನೆ./ ಇಂದಿಗೂ ಗ್ರಾಮೀಣ ಭಾರತದ ಕೆಳಜಾತಿ ದಲಿತ ಮಹಿಳೆಯರ ಸ್ಥಿತಿ ವಾಸ್ತವದ ಕಹಿಯಾಗಿದೆ. ಭಾರತೀಯ ಸ್ತ್ರೀವಾದದ ಪ್ರಸ್ತುತತೆ ಇಲ್ಲಿ ಅತ್ಯಂತ ಮುಖ್ಯವಾಗಿದೆ. ಮಧ್ಯಮ ಮತ್ತು ದಲಿತ ಮೇಲ್ವರ್ಗದ ಸಮಾಜದಲ್ಲಿ ಮಹಿಳಾ ಹಕ್ಕುಗಳ ಹೋರಾಟದ ವಿಭಿನ್ನ ಆಯಾಮಗಳನ್ನು ಈಗ ನೋಡುತ್ತಿದ್ದು, ಶಿಕ್ಷಣದ ಅರಿವು ಈಗ ನಮ್ಮಲ್ಲಿದ್ದರೂ ಹೆಣ್ಣು ಮಗುವಿನ ಜನನ ವಿದ್ಯಾವಂತ ಸಮಾಜದಲ್ಲಿಯೂ ಸಾಂಸಾರಿಕ ಹೊರೆಯಾಗಿ ಮಾರ್ಪಟ್ಟಿದೆ. ವರದಕ್ಷಿಣೆಯ ಪಿಡುಗು ಸುಶಿಕ್ಷಿತ ಮಹಿಳೆಯರನ್ನು ಬಿಡದೆ ಇರುವುದು, ವರದಕ್ಷಿಣೆ ಪದ್ಧತಿ ಇಂದಿಗೂ ಅಸ್ತಿತ್ವದಲ್ಲಿರುವುದು. ವಿದ್ಯಾವಂತ ಮಹಿಳೆಯರು ವಿದ್ಯೆಯ ಅರಿವಿನಲ್ಲಿ ಗಟ್ಟಿಯಾದ ವ್ಯಕ್ತಿತ್ವವನ್ನು ಮಾಡಿಸಿಕೊಳ್ಳುವುದರಲ್ಲಿ ವಿಫಲರಾಗುತ್ತಿದ್ದಾರೆ. ತನ್ನ ಹಕ್ಕುಗಳನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಕೆಲವು ಸುಶಿಕ್ಷಿತ ಮಹಿಳೆಯರು ದಿಟ್ಟ ಹೆಜ್ಜೆಯನ್ನು ಇಡುತ್ತಿರುವುದನ್ನು ಕಾಣಬಹುದು. ಶೋಷಣೆಗೆ ಒಳಗಾಗಿರುವ ಮಹಿಳೆಗೆ ಸ್ತ್ರೀವಾದ ಪ್ರಬಲ ಅಸ್ತ್ರ. ಪುರುಷ ಮತ್ತು ಸ್ತ್ರೀವಾದ ಇನ್ನು ಕ್ರಮಿಸಬೇಕಾದ ಹಾದಿಯು ಬಹಳಷ್ಟಿದೆ. ಈ ಹಾದಿಯಲ್ಲಿ ಪುರುಷ-ಮಹಿಳೆ ಪರಸ್ಪರ ಪ್ರೀತಿ ಮತ್ತು ಸಹನೆ ತೋರಬೇಕು. ಪರಸ್ಪರರನ್ನು ಗೌರವಿಸುವ, ಮಾನವೀಯ ಸಂಬಂಧಗಳನ್ನು ಗೌರವದಿಂದ ಕಾಣುವಂತೆ ಆಗಬೇಕು. ಪುರುಷ ಪ್ರಧಾನ ಸಮಾಜವಾಗಿರುವ ಭಾರತದಲ್ಲಿ ಈ ನಿಲುವನ್ನು ಬಹು ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ.



www.kpscvaani.com

3. **Translate the following passage from English to Kannada :** 10

**ಈ ಕೆಳಕಂಡ ಖಂಡಿಕೆಯನ್ನು ಆಂಗ್ಲಭಾಷೆಯಿಂದ ಕನ್ನಡಕ್ಕೆ ಭಾಷಾಂತರ ಮಾಡಿರಿ :**

Commitment is an integral part of a good value system. Commitment simply implies, dependability, reliability and a sense of duty, sincerity, integrity, loyalty, predictability, consistency, caring and empathy. When our value system is clear, it will be a lot easier, to make decision and commitments.

Commitment is not like an enforceable legal contract. It does not mean sticking to something when you have no choice. We should always keep in mind that values of needs are stronger than wants. So commitment acts as glue that bonds relationship. It implies sacrifice when you have no choice. It implies sacrifice when required. Individuals with strong commitment build strong communities. Most of the time relationship are based on commitment, not just on closeness and intimacy. It shows strength of character.

We know that needs are essential, where as desires are infinite, but in case of conflict of needs, one has to prioritize, responsibilities and duties.

Sometimes good people with best intention are faced with conflict commitment. Always commitments should be kept to build good relationship and to come out of stress, guilt, isolation and depression.

4. **Write a summary (Precis) of the passage given below by reducing it to $\frac{1}{3}$ of the size :** 10

**ಈ ಕೆಳಕಂಡ ಖಂಡಿಕೆಯ ಸಾರಾಂಶವನ್ನು $\frac{1}{3}$ ಭಾಗಕ್ಕೆ ಮೀರದಂತೆ ಬರೆಯಿರಿ :**

ಸಂಪನ್ಮೂಲಗಳ ಕೊರತೆ, ನೀರಿನ ಅಭಾವ ಇವೆಲ್ಲಕ್ಕಿಂತಲೂ ರೈತರೊಳಗೆ ಮಾಯವಾಗಿರುವ ಪರಸ್ಪರ ವಿಶ್ವಾಸ ಮತ್ತು ಅವಲಂಬನೆಗಳನ್ನು ಮತ್ತೆ ಕಟ್ಟಿಕೊಡಬೇಕಾಗಿದೆ. ಮಹಿಳೆಯರು ಜಮೀನಿನ ಒಡೆಯರಲ್ಲ. ಕಾನೂನಿನಲ್ಲಿ ಅವಕಾಶವಿದ್ದರೂ ಮಹಿಳೆಯರ ಹೆಸರಲ್ಲಿ ಇಂದಿಗೂ ಭೂಮಿ ಇಲ್ಲ. ಭೂಮಿ ಇರುವ ಕುಟುಂಬದಲ್ಲಿ ಹುಟ್ಟಿದರು ಜಮೀನುದಾರರನ್ನೇ ವಿವಾಹವಾದರೂ ಅವಳು ಭೂಹೀನಳೇ. ಬೀಜ ಸಂಗ್ರಹಣೆಯಲ್ಲಿ ಅವಳು ವಹಿಸುತ್ತಿದ್ದ ಅತಿ ಮಹತ್ವದ ಪಾತ್ರ ಕಳೆಗುಂದಿದೆ. ಭೂಮಿಯ ಒಡೆಯ ಮಹಿಳೆಗೂ ಯಜಮಾನ. ಆಧುನಿಕ ಕೃಷಿ ಬಂದಾಗಿನಿಂದ ಯಾವ ಬೆಳೆ ತೆಗೆಯಬೇಕು ಎಂಬ ವಿಚಾರದಿಂದ ಹಿಡಿದು ಎಲ್ಲದರಲ್ಲೂ ಅವಳ ಪಾತ್ರ ನಗಣ್ಯವಾಗಿದೆ/ಆದರೆ ಎಲ್ಲಾ ಅವಕಾಶಹೀನತೆಗಳನ್ನು ಮೆಟ್ಟಿ ನಿಲ್ಲಬೇಕಾದರೂ ಎಲ್ಲಾ ಮಹಿಳೆಯರು ಒಟ್ಟುಗೂಡಿ ಸಾಮುದಾಯಿಕ ಕೃಷಿ ಮಾಡಿದಾಗ, ಸಂಘಟಿತರಾಗಿ ದುಡಿದಾಗ, ಕೂಲಿಕಾರರ ಸಮಸ್ಯೆ, ಒಟ್ಟುಗೂಡಿಸಿದ ಬಂಡವಾಳ ಮತ್ತು ಕೌಶಲ ಶಕ್ತಿಯನ್ನು ರೈತರಿಗೆ ತಂದುಕೊಡುತ್ತದೆ. ಕೇರಳ ಮತ್ತು ತೆಲಂಗಾಣದಲ್ಲಿ 2000ನೇ ಇಸವಿಯಲ್ಲಿ ಕೇವಲ ಹೆಣ್ಣುಮಕ್ಕಳೇ ಒಟ್ಟಾಗಿ ಬೇರೆಯವರ ಹೊಲಗಳನ್ನು ಗುತ್ತಿಗೆ ಪಡೆದು ಕೃಷಿ ಮಾಡತೊಡಗಿದ್ದರು. ತೆಲಂಗಾಣದಲ್ಲಿ ವಿಶ್ವ ಸಂಸ್ಥೆಯ ಅಭಿವೃದ್ಧಿ ಯೋಜನೆಯ ಸಹಭಾಗಿತ್ವದಲ್ಲಿ 500 ಸ್ವಸಹಾಯ ಗುಂಪುಗಳು ಒಗ್ಗೂಡಿಸಿ "ಸಮತಾದಾರಣ" ಹೆಸರಿನಲ್ಲಿ ಸೊಸೈಟಿಯ ಮೂಲಕ ಬೆಂಬಲಿಸಿತು. ಉಳಿತಾಯ ಗುಂಪುಗಳಲ್ಲಿದ್ದ ಎಲ್ಲಾ ಸದಸ್ಯರೂ ಈ ಸಂಘದ ಸದಸ್ಯರಾಗಿ ಐದು ವರ್ಷಗಳವರೆಗೆ ಬೀಜ ಖರೀದಿಗೆಂದು ಆರಂಭಿಕ ಬಂಡವಾಳದ ಸುತ್ತು ನಿಧಿ, ಆರ್ಥಿಕ ತರಬೇತಿಗಳು ಮತ್ತು ಈ ಸಂಸ್ಥೆಯ ಬೆಂಬಲದೊಂದಿಗೆ ಈ ಗುಂಪುಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದವು. ಒಟ್ಟುಗೂಡಿದ ಮಹಿಳೆಯರು ಮಾತ್ರ ಈ ಕೆಲಸ ಮಾಡಬಲ್ಲರು. ಒಟ್ಟುಗೂಡಿ ಮಾಡುವ ಕೃಷಿಯ ವಿಚಾರವನ್ನು ನಾವಿಂದು ಮತ್ತೆ ಬಿತ್ತಬೇಕಾಗಿದೆ, ನಮ್ಮ ಭೂಮಿಯ ಪರಭಾರೆ ಆಗುವ ಮೊದಲು ಸ್ಥಳೀಯ ಮಹಿಳೆಯರ ಸಂಘಕ್ಕೆ ಕೊಡಬೇಕು. ಒಟ್ಟುಗೂಡಿದ ಮಹಿಳೆಯರ ಕೈಗೆ ಗ್ರಾಮದ ಬೀಳು-ಭೂಮಿ ಬಂದಾಗ ಖಂಡಿತವಾಗಿ ಗ್ರಾಮದ ಚಿತ್ರಣವೇ ಬದಲಾಗುತ್ತದೆ. ತಾಯಂದಿರು ಭೂತಾಯಿಯ ರಕ್ಷಣೆಗೆ ಮುಂದಾಗುತ್ತಾರೆ, ರಾಸಾಯನಿಕಗಳ ಸಿಂಪಡನೆಯಿಂದ ಗಾಯಗೊಂಡಿರುವ ನೆಲವನ್ನು ಸಂತೈಸುತ್ತಾರೆ, ಗೊಬ್ಬರದಿಂದ ಉಪಚಾರ ಮಾಡುತ್ತಾರೆ. ಪ್ರಾಕೃತಿಕ ಅಂಶಗಳು ಮರಳಿ ಮಣ್ಣಿಗೆ ಬರುವಂತೆ ಮಾಡಿ ಜೀವ ವೈವಿಧ್ಯವನ್ನು ಹೆಚ್ಚಿಸಿ ಭೂಮಿಯಲ್ಲಿ ಹಸಿರಿನ ಜೀವ ನಳನಳಿಸುವಂತೆ ಮಾಡುವರು. ಸ್ಥಳೀಯ ಮಹಿಳೆಯರ ನೇತೃತ್ವದಲ್ಲಿರುವ ಸಂಘಗಳ ಕೈಗೆ ಭೂಮಿಯನ್ನು ನಮ್ಮ ಭೂಮಿ ಪರಭಾರೆ ಆಗುವ ಮೊದಲು ನೀಡಬೇಕು. ಭೂತಾಯಿಯು ಹಸಿರು ಹೊದ್ದುವಂತೆ ಮಾಡಬೇಕಾದರೆ ಸಂಘಟಿತರಾಗಿರುವ ನಮ್ಮ ಗ್ರಾಮೀಣ ಹಿನ್ನಲೆಯ ಕೃಷಿ ಮಹಿಳೆಯರಿಂದ ಸಾಧ್ಯ. ಬರಿದಾಗಿರುವ ಭೂಮಿಗೆ ಚೈತನ್ಯ ನೀಡುವರು. ಕುಟುಂಬದ ಆರ್ಥಿಕಾಭಿವೃದ್ಧಿಗೆ ಕಾರಣವಾಗುವರು. ರೈತರ ಆತ್ಮಹತ್ಯೆಗಳು ಕಡಿಮೆಯಾಗುವ ನಿಟ್ಟಿನಲ್ಲಿ ಕೃಷಿಯಲ್ಲಿ ಒಗ್ಗೂಡಿದ ರೈತ ಮಹಿಳೆಯರಿಂದ ಇದು ಸಾಧ್ಯವಾಗುತ್ತದೆ.

N.N : 75

www.kpscvaani.com

# Paper – 2018

1. "ಒಬ್ಬಂಟಿಯಾಗಿ ಸತ್ಯಾಗ್ರಹ" ಮಾಡುವುದಕ್ಕೆ ಆಯ್ಕೆಯಾದ ಮೊದಲ ಸತ್ಯಾಗ್ರಹಿ ಯಾರು ?
   (a) ಡಾ. ರಾಜೇಂದ್ರ ಪ್ರಸಾದ್
   (b) ಪಂಡಿತ್ ಜವಾಹರ್‌ಲಾಲ್ ನೆಹರೂ
   (c) ಸಿ. ರಾಜಗೋಪಾಲಾಚಾರಿ
   (d) ವಿನೋಬಾ ಭಾವೆ

2. ಈ ಕೆಳಕಂಡ ಯಾವ ಜೋಡಿ ಸರಿಯಾಗಿ ಹೊಂದಾಣಿಕೆ ಆಗಿಲ್ಲ?
   (a) ಚೌರಿ ಚೌರ ಘಟನೆ – 1922
   (b) ಮಿಂಟೋ-ಮಾರ್ಲೆ ಸುಧಾರಣೆ – 1909
   (c) ದಂಡಿ ಯಾತ್ರೆ – 1931
   (d) ಬಾರ್ಡೋಲಿ ಸತ್ಯಾಗ್ರಹ – 1928

3. ಕಲ್ಪನಾ ದತ್‌ರವರು ಈ ಕೆಳಕಂಡ ಯಾವ ಘಟನೆಗೆ ಸಂಬಂಧಿಸಿದ್ದಾರೆ ಹಾಗೂ ಸದರಿ ಘಟನೆಯು ಸೂರ್ಯಸೇನ್‌ರವರು ನೇತೃತ್ವ ವಹಿಸುವಂತೆ ಆಯಿತು ?
   (a) ಚಿತ್ತಗಾಂಗ್ ಶಸ್ತ್ರಾಸ್ತ್ರ ದಾಳಿ
   (b) ಅಭಿನವ ಭರತ
   (c) ಕುಕಾ ಚಳುವಳಿ
   (d) ಕಕೋರಿ ರೈಲು ದರೋಡೆ

4. ರಾಸ್ತ್ ಗೋಫ್ತರ್ ಪತ್ರಿಕೆಯನ್ನು ಈ ಕೆಳಕಂಡವರಲ್ಲಿ ಯಾರು ಪ್ರಾರಂಭಿಸಿದರು ?
   (a) ದಾದಾಬಾಯಿ ನವರೋಜಿ
   (b) ರಾಜಾರಾಂ ಮೋಹನ್‌ರಾಯ್
   (c) ರವೀಂದ್ರನಾಥ ಠ್ಯಾಗೋರ್
   (d) ಶಿಶಿರ್ ಕುಮಾರ್ ಘೋಷ್

5. 1857 ರಲ್ಲಿ ನಡೆದ ದಂಗೆಯಲ್ಲಿ ನಾನಾ ಸಾಹೇಬರು ಕೆಳಕಂಡ ಯಾವ ಸ್ಥಳದಿಂದ ಬಂದವರಾಗಿರುತ್ತಾರೆ ?
   (a) ದೆಹಲಿ
   (b) ಲಕ್ನೋ
   (c) ಬಿಹಾರ್
   (d) ಕಾನ್ಪುರ

1. In the "Individual Satyagraha" who was chosen as the first Satyagrahi ?
   (a) Dr. Rajendra Prasad
   (b) Pandit Jawaharlal Nehru
   (c) C. Rajagopalachari
   (d) Vinobha Bhave

2. Which one of the following pairs is not correctly matched ?
   (a) Chauri-Chaura Incident – 1922
   (b) Minto-Morley Reforms – 1909
   (c) Dandi March – 1931
   (d) Bardoli Satyagrah – 1928

3. Kalpana Dutt was related to which of the following incidents, this incident was lead by Surya Sen ?
   (a) Chittagong Armory Raid
   (b) Abhinav Bharat
   (c) Kuka Movement
   (d) Kakori train robbery

4. Who among the following started the newspaper Rast Goftar ?
   (a) Dadabhai Naoroji
   (b) Raja Ram Mohan Roy
   (c) Ravindranath Tagore
   (d) Sisir Kumar Ghosh

5. To which one of the following places did Nana Saheb, a prominent leader of the Revolt of 1857 belong to ?
   (a) Delhi
   (b) Lucknow
   (c) Bihar
   (d) Kanpur



www.kpscvaani.com

6. 2018ರ ಏಷ್ಯಾದ ಕ್ರೀಡಾಕೂಟ ನಡೆದ ಸ್ಥಳ

(a) ಮಲೇಶಿಯಾ

(b) ಇಂಡೋನೇಶಿಯಾ

(c) ಶ್ರೀಲಂಕಾ

(d) ಥೈಲ್ಯಾಂಡ್

7. 2018 ಫೀಫಾ ವಿಶ್ವಕಪ್‌ನಲ್ಲಿ ಮೂರನೇ ಸ್ಥಾನವನ್ನು ಪಡೆದ ರಾಷ್ಟ್ರ

(a) ಇಂಗ್ಲೆಂಡ್

(b) ಬ್ರೆಜಿಲ್

(c) ಬೆಲ್ಜಿಯಂ

(d) ರಷ್ಯಾ

8. 2017ರಲ್ಲಿ ಸಾಹಿತ್ಯಕ್ಕಾಗಿ ನೀಡಲಾಗುವ ನೋಬೆಲ್ ಪ್ರಶಸ್ತಿಯನ್ನು ಪಡೆದವರು

(a) ರಿಚರ್ಡ್ ಟಾಲರ್

(b) ಆ್ಯಂಗಸ್ ಡೆಟನ್

(c) ಆಲಿವರ್ ಹಾರ್ಟ್

(d) ಕಜೂ ಇಸಿಗುರೊ

9. ಕಿವಿ ಯಾವ ದೇಶದ ರಾಷ್ಟ್ರೀಯ ಪಕ್ಷಿ ?

(a) ನ್ಯೂಜಿಲ್ಯಾಂಡ್

(b) ಯುನೈಟೆಡ್ ಕಿಂಗ್‌ಡಂ

(c) ಕೆನಡಾ

(d) ಜಪಾನ್

10. ಇಂಟರ್‌ಪೋಲ್‌ನ ಕೇಂದ್ರಸ್ಥಾನವು ಯಾವ ರಾಷ್ಟ್ರದಲ್ಲಿದೆ ?

(a) ಫ್ರಾನ್ಸ್

(b) ಯು.ಕೆ.

(c) ಯು.ಎಸ್.ಎ.

(d) ಇಟಲಿ

6. Asian Games – 2018 to be held at

(a) Malaysia

(b) Indonesia

(c) Sri Lanka

(d) Thailand

7. In FIFA World Cup 2018, which country secured the 3rd place ?

(a) England

(b) Brazil

(c) Belgium

(d) Russia

8. Nobel Prize in literature for 2017 was awarded to

(a) Rechard Thaler

(b) Angus Deaton

(c) Oliver Hart

(d) Kazuo Ishiguro

9. Kivi is National bird of which country ?

(a) New Zealand

(b) United Kingdom

(c) Canada

(d) Japan

10. 'Interpol' is headquartered in which country ?

(a) France

(b) UK

(c) USA

(d) Italy



www.kpscvaani.com

11. 65ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ಚಲನಚಿತ್ರ ಪ್ರಶ್ತಿ ಪಡೆದ ಚಲನಚಿತ್ರ
   (a) ವಿಲೇಜ್ ರಾಕ್‌ಸ್ಟಾರ್ಸ್
   (b) ಮಮ್
   (c) ನಗರ್‌ಕೀರ್‌ತನ್
   (d) ಭಯಾನ್‌ಕಾಮ್

12. ಭಾರತದ ಪ್ರಸಕ್ತ ಮುಖ್ಯ ಚುನಾವಣಾ ಆಯುಕ್ತರು
   (a) ಓಂ ಪ್ರಕಾಶ್ ರಾವತ್
   (b) ನಸೀಂ ಜೈದಿ
   (c) ಯು. ಎಸ್. ಸಂಪತ್
   (d) ಎಸ್. ವೈ. ಖುರೇಶಿ

13. ಹರಿ ಪ್ರಸಾದ್ ಚೌರಾಶಿಯಾರವರು ಯಾವ ಸಂಗೀತ ವಾದ್ಯಗಳಲ್ಲಿ ನುರಿತರಾಗಿದ್ದಾರೆ ?
   (a) ತಬಲಾ
   (b) ಸಿತಾರಾ
   (c) ಕೊಳಲು
   (d) ವೀಣಾ

14. ಯಾವ ಕ್ಷೇತ್ರದಲ್ಲಿ ಗ್ರಾಮಿ ಪ್ರಶಸ್ತಿಯನ್ನು ನೀಡಲಾಗುತ್ತದೆ ?
   (a) ವಿಜ್ಞಾನ
   (b) ಸಾಹಿತ್ಯ
   (c) ಪತ್ರಿಕೋದ್ಯಮ
   (d) ಸಂಗೀತ

15. ಗೀತ ಗೋವಿಂದ ಪುಸ್ತಕವನ್ನು ಬರೆದವರು
   (a) ಬಾಣ ಭಟ್ಟ
   (b) ವೇದ ವ್ಯಾಸ
   (c) ಜಯದೇವ
   (d) ಕಾಳಿದಾಸ

11. In 65th National Film Awards Best Feature Film Award were given to
   (a) Village Rockstars
   (b) Mom
   (c) Nagarkirtan
   (d) Bhayankam

12. Who is the present Chief Election Commissioner of India ?
   (a) Om Prakash Rawat
   (b) Nasim Zaidi
   (c) U. S. Sampath
   (d) S. Y. Quraishi

13. Hari Prasad Chaurasia is an exponent of which musical instrument ?
   (a) Tabla
   (b) Sitar
   (c) Flute
   (d) Veena

14. Grammy Awards is given in the field of
   (a) Science
   (b) Literature
   (c) Journalism
   (d) Music


15. Book "Geet Govind" was written by
   (a) Bana Bhatta
   (b) Ved Vyas
   (c) Jayadev
   (d) Kalidasa



www.kpscvaani.com

ವೃತ್ತ ನಕ್ಷೆಯಲ್ಲಿ ಕೊಟ್ಟಿರುವ ಆಧಾರದ ಮೇಲೆ ಪ್ರಶ್ನೆ **16** ರಿಂದ **19** ಪ್ರಶ್ನೆಗಳನ್ನು ಉತ್ತರಿಸಿರಿ.

**ರಾಜ್ಯ ಮತ್ತು ಸ್ಥಳೀಯ ಸರ್ಕಾರದ ವೆಚ್ಚ**





16. ಒಟ್ಟು $ 50,000 ಗಳನ್ನು ವೆಚ್ಚ ಮಾಡಿದಾಗ ಹೆದ್ದಾರಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿರುತ್ತದೆ ?
    (a) $ 3,500
    (b) $ 22,500
    (c) $ 15,000
    (d) $ 20,000

17. ಹೆದ್ದಾರಿಗಾಗಿ ವೆಚ್ಚ ಮಾಡಿರುವ ಹಣದ ಎಷ್ಟು ಪಟ್ಟು ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಗಿರುತ್ತದೆ ?
    (a) 10
    (b) 3
    (c) 5
    (d) 15

18. ಸರಿ ಸುಮಾರು ಹೆದ್ದಾರಿ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಜೊತೆಗೂಡಿ ಒಟ್ಟು ವೆಚ್ಚದಲ್ಲಿ ಖರ್ಚು ಮಾಡಿದ ಭಿನ್ನಾಂಶ
    (a) $2/5$
    (b) $1/5$
    (c) $1/2$
    (d) $2/3$

Based on the circle graph given below, answer the following questions **(16-19)**.

**Expenditure for state and local governments**




16. If the total spending is $ 50,000, how much money was spent on highways ?
    (a) $ 3,500
    (b) $ 22,500
    (c) $ 15,000
    (d) $ 20,000

17. Approximately how many times the amount spending on highways is spent on education ?
    (a) 10
    (b) 3
    (c) 5
    (d) 15

18. Approximately what fraction of the total expenditures are spent on highways and public welfare combined ?
    (a) $2/5$
    (b) $1/5$
    (c) $1/2$
    (d) $2/3$



www.kpscvaani.com

19. ಒಟ್ಟು $ 50,000 ಹಣವನ್ನು ವೆಚ್ಚ ಮಾಡಿದ್ದರೆ, ಇತರೆಗಳಿಗಾಗಿ ವೆಚ್ಚ ಮಾಡಿದ ಹಣವೆಷ್ಟು ?
   (a) $ 22,500
   (b) $ 15,000
   (c) $ 30,000
   (d) $ 20,000

20. ಒಂದು ಸಂಕೇತ ಭಾಷೆಯಲ್ಲಿ FASHION ನ್ನು FOIHSAN ಎಂದು ಸಂಕೇತ ಆಗಿ ನಮೂದಿಸಿದ್ದು, PROBLEM ನ್ನು ಯಾವ ರೀತಿ ಸಂಕೇತ ಮಾಡಲಾಗಿರುತ್ತದೆ ?
   (a) PELBORM
   (b) PRBOELM
   (c) RPBEOLM
   (d) RPBOELM

21. A ಯು B ಯ ಸಹೋದರಿ, C ಯು B ನ ತಾಯಿ, D ಯು C ನ ತಂದೆ, E ಯು D ನ ತಾಯಿ, ಹಾಗಾದರೆ A ಯಾವ ರೀತಿ D ಗೆ ಸಂಬಂಧಪಡಬೇಕು ?
   (a) ತಾತ
   (b) ಅಜ್ಜಿ
   (c) ಮಗಳು
   (d) ಮೊಮ್ಮಗಳು

22. ಒಂದು ಅರೆವಾಹಕದ ವಾಹಕತೆಯು ತಾಪದೊಂದಿಗೆ ಹೆಚ್ಚಳವಾಗಲು ಕಾರಣ
   (a) ಸ್ವತಂತ್ರ ವಿದ್ಯುತ್ ವಾಹಕಗಳ ಸಾಂದ್ರತೆಯು ಹೆಚ್ಚಾಗುತ್ತದೆ
   (b) ಎಲೆಕ್ಟ್ರಾನ್‌ಗಳ ವಿಶ್ರಾಂತಿ ಸಮಯವು ಹೆಚ್ಚಾಗುತ್ತದೆ
   (c) ವಾಹಕ ಕಣಗಳ ಸಾಂದ್ರತೆ ಮತ್ತು ವಿಶ್ರಾಂತಿ ಸಮಯ ಎರಡೂ ಹೆಚ್ಚಾಗುತ್ತದೆ
   (d) ವಾಹಕ ಕಣಗಳ ಸಾಂದ್ರತೆ ಹೆಚ್ಚಾಗಿ ವಿಶ್ರಾಂತ ಸಮಯವು ಕಡಿಮೆಯಾಗುತ್ತದೆ. ಆದರೆ ವಿಶ್ರಾಂತ ಸಮಯದಲ್ಲಿನ ಇಳಿಕೆಯ ಪರಿಣಾಮವು ವಾಹಕ ಸಾಂದ್ರತೆಯ ಹೆಚ್ಚಳದಿಂದಾಗುವ ಪರಿಣಾಮಕ್ಕಿಂತ ತುಂಬಾ ಕಡಿಮೆಯಿರುತ್ತದೆ

19. If the total spending is $ 50,000, how much money was spent as other expenses ?
   (a) $ 22,500
   (b) $ 15,000
   (c) $ 30,000
   (d) $ 20,000

20. If in a certain language FASHION is coded as FOIHSAN, how is PROBLEM coded in that code ?
   (a) PELBORM
   (b) PRBOELM
   (c) RPBEOLM
   (d) RPBOELM

21. A is B's sister. C is B's mother. D is C's father. E is D's mother. Then how is A related to D ?
   (a) Grandfather
   (b) Grandmother
   (c) Daughter
   (d) Granddaughter

22. The conductivity of a semiconductor increases with increase in temperature because
   (a) Number density of free current carriers increase
   (b) Relaxation time of electron increases
   (c) Both number of density of carriers and relaxation time increase
   (d) Number density of current carriers increases, relaxation time decreases but effect of decrease in relaxation time is much less than increase in number density



www.kpscvaani.com

23. ಷಡ್ ದಶಮಾನ ಸಂಖ್ಯೆ $(AB)_{16}$ ಗೆ ಸಮನಾದ ದಶಮಾನ ಸಂಖ್ಯೆಯು

(a) 121

(b) 171

(c) 141

(d) 200

24. ಷಡ್ ದಶಮಾನ $(AF)_{16}$ ಗೆ ಸಮನಾದ ದ್ವಿಮಾನ ಸಂಖ್ಯೆಯು

(a) 1010 1111

(b) 1111 1111

(c) 1010 1010

(d) 1000 1000

25. ದ್ವಿಮಾನ ಸಂಖ್ಯೆ 111 100 010 ನ್ನು ಅಷ್ಟಮಾನ ಸಂಖ್ಯೆಗೆ ಪರಿವರ್ತಿಸಿ.

(a) 842

(b) 222

(c) 742

(d) 100

26. ಕಂಪೈಲರ್ ಎಂಬುದು

(a) ಮುದ್ರಕ

(b) ಒಂದು ಹೈ ಲೆವೆಲ್ ಲಾಂಗ್ವೇಜ್‌ನಿಂದ ಇನ್ನೊಂದು ಹೈ ಲೆವೆಲ್ ಲಾಂಗ್ವೇಜ್‌ಗೆ ಭಾಷಾಂತರಿಸುವ ಪ್ರೋಗ್ರಾಂ

(c) ಒಂದು ಹೈ ಲೆವೆಲ್ ಲಾಂಗ್ವೇಜ್‌ನಿಂದ ಯಾಂತ್ರಿಕ ಭಾಷೆಗೆ ಭಾಷಾಂತರಿಸುವ ಪ್ರೋಗ್ರಾಂ

(d) ಮೇಲಿನ ಯಾವುದೂ ಅಲ್ಲ

27. ಧ್ರುವ ಪ್ರದೇಶಗಳಲ್ಲಿ ಗುರುತ್ವಾಕರ್ಷಣ ವೇಗೋತ್ಕರ್ಷವು

(a) ಸಮಭಾಜಕ ವೃತ್ತದಲ್ಲಿರುವಷ್ಟೇ ಇರುತ್ತದೆ

(b) ಸಮಭಾಜಕ ವೃತ್ತದಲ್ಲಿರುವುದಕ್ಕಿಂತ ಹೆಚ್ಚಾಗಿರುತ್ತದೆ

(c) ಸಮಭಾಜಕ ವೃತ್ತದಲ್ಲಿರುವುದಕ್ಕಿಂತ ಕಡಿಮೆಯಿರುತ್ತದೆ

(d) ಶೂನ್ಯವಾಗಿರುತ್ತದೆ

23. The decimal equivalent of hexadecimal number $(AB)_{16}$ is

(a) 121

(b) 171

(c) 141

(d) 200

24. The binary equivalent of hexadecimal $(AF)_{16}$ is

(a) 1010 1111

(b) 1111 1111

(c) 1010 1010

(d) 1000 1000

25. Convert the binary number 111 100 010 to octal number.

(a) 842

(b) 222

(c) 742

(d) 100

26. A compiler is

(a) A printer

(b) A program which translates from one high level to another high level language

(c) A program which translates from one high-level to a machine level language

(d) None of the above

27. In the polar regions, the value of acceleration due to gravity

(a) is same as at the equator

(b) is more than at the equator

(c) is less than at the equator

(d) zero



www.kpscvaani.com

28. ಒಂದು ಏಕಮಾನ ಧನ ವಿದ್ಯುತ್ ಆವೇಶವನ್ನು ವಿದ್ಯುತ್ ಮಂಡಲದ ಎರಡೂ ಬಿಂದುಗಳ ನಡುವೆ ಚಲಿಸಲು ಮಾಡಿದ ಕೆಲಸವು ಈ ಕೆಳಗಿನವುಗಳಲ್ಲಿ ಯಾವುದರ ಅಳತೆಯಾಗಿದೆ ?

(a) ವಿದ್ಯುತ್ ಪ್ರವಾಹ

(b) ವಿಭವಾಂತರ

(c) ವಿದ್ಯುತ್‌ರೋಧ

(d) ವಿದ್ಯುತ್ ಸಾಮರ್ಥ್ಯ

29. ಒಂದು ಬಲ್ಬ್ ಮೂಲಕ ವಿದ್ಯುತ್ ಪ್ರವಾಹವನ್ನು ಹರಿಸಿದಾಗ ಬಲ್ಬ್ ಬೆಳಗುತ್ತದೆ, ಕಾರಣ

(a) ವಿದ್ಯುತ್ ಪ್ರವಾಹದ ವಿದ್ಯುತ್ ಪರಿಣಾಮ

(b) ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮ

(c) ವಿದ್ಯುತ್ ಪ್ರವಾಹದ ಬೆಳಕಿನ ಪರಿಣಾಮ

(d) ವಿದ್ಯುತ್ ಪ್ರವಾಹದ ಶಾಖೋತ್ಪನ್ನ ಪರಿಣಾಮ

30. ಶಾರ್ಟ್ ಸರ್ಕ್ಯೂಟ್ ಸಂದರ್ಭದಲ್ಲಿ ಮಂಡಲದಲ್ಲಿನ ವಿದ್ಯುತ್ ಪ್ರವಾಹವು

(a) ಹಂತ-ಹಂತವಾಗಿ ಕಡಿಮೆಯಾಗುತ್ತದೆ

(b) ಬದಲಾಗುವುದಿಲ್ಲ

(c) ಹೆಚ್ಚಿನ ಪ್ರಮಾಣದಲ್ಲಿ ಏರಿಕೆಯಾಗುತ್ತದೆ

(d) ನಿರಂತರವಾಗಿ ಬದಲಾಗುತ್ತದೆ

31. ಅಲ್ಗಾರಿಥಂ ಮತ್ತು ಫ್ಲೋಚಾರ್ಟ್ ಇದಕ್ಕೆ ಸಹಾಯ ಮಾಡುತ್ತದೆ

(a) ಸಂಗ್ರಹ ಶಕ್ತಿಯನ್ನು ತಿಳಿದುಕೊಳ್ಳಲು

(b) ಸಂಖ್ಯಾ ಪದ್ಧತಿಯನ್ನು ಗುರುತಿಸಲು

(c) ಪ್ರಿಂಟರ್‌ಗೆ ಉತ್ಪತ್ತಿಯಾದ ಸಂದೇಶವನ್ನು ರವಾನಿಸುತ್ತದೆ

(d) ಸಮಸ್ಯೆಯನ್ನು ನಿಖರವಾಗಿ ಮತ್ತು ಪೂರ್ಣವಾಗಿ ಗುರುತಿಸುತ್ತದೆ

32. MICRನ ವಿಸ್ತೃತ ರೂಪ

(a) ಮ್ಯಾಗ್ನಟಿಕ್ ಇಂಕ್ ಕೇಸಸ್ ರೀಡರ್

(b) ಮ್ಯಾಗ್ನಟಿಕ್ ಇಂಕ್ ಕಾರ್ಡ್ ರಿಕಾಗ್ನಿಸನ್

(c) ಮ್ಯಾಗ್ನಟಿಕ್ ಇಂಕ್ ಕ್ಯಾರೆಕ್ಟರ್ ರಿಕಾಗ್ನಿಸನ್

(d) ಮೇಲಿನ ಯಾವುದೂ ಅಲ್ಲ

28. The work done in moving a unit positive charge, across two points in an electric circuit is measure of

(a) Current

(b) Potential difference

(c) Resistance

(d) Power

29. When electric current is passed through a bulb, the bulb gives light because of

(a) Electric effect of current

(b) Magnetic effect of current

(c) Lighting effect of current

(d) Heating effect of current

30. At the time of short circuit, the current in the circuit

(a) Reduces substantially

(b) Does not change

(c) Increases heavily

(d) Vary continuously

31. Algorithm and Flowchart help us to

(a) Know the memory capacity

(b) Identify the base of a number system

(c) Direct the output to a printer

(d) Specify the problem completely and clearly

32. MICR stands for

(a) Magnetic Ink Cases Reader

(b) Magnetic Ink Card Recognition

(c) Magnetic Ink Character Recognition

(d) None of the above



www.kpscvaani.com

33. ಕಂಪ್ಯೂಟರ್‌ನ ವೇಗವನ್ನು ಇದರಿಂದ ಅಳೆಯಲಾಗುತ್ತದೆ
(a) ಸೆಕೆಂಡ್
(b) ನಿಮಿಷ
(c) ಕ್ಲಾಕ್ ಸೈಕಲ್ಸ್
(d) ಮೇಲಿನ ಎಲ್ಲವೂ

34. ಮೈಕ್ರೊಸಾಫ್ಟ್ ವರ್ಡ್ ಎಂಬುದು ಈ ಕೆಳಗಿನ ಯಾವುದಕ್ಕೆ ಉದಾಹರಣೆಯಾಗಿದೆ?
(a) ಆಪರೇಟಿಂಗ್ ಸಿಸ್ಟಂ
(b) ಪ್ರಕ್ರಿಯಾ ಸಾಧನ
(c) ಅನ್ವಯಿಕ ಸಾಫ್ಟ್‌ವೇರ್
(d) ಇನ್‌ಪುಟ್ ಡಿವೈಸ್

35. BIOS ವಿಸ್ತೃತ ರೂಪ
(a) ಬೇಸಿಕ್ ಇನ್‌ಪುಟ್ ಔಟ್‌ಪುಟ್ ಸಿಸ್ಟಂ
(b) ಬೈನರಿ ಇನ್‌ಪುಟ್ ಔಟ್‌ಪುಟ್ ಸಿಸ್ಟಂ
(c) ಬೇಸಿಕ್ ಇನ್‌ಪುಟ್ ಆಫ್ ಸಿಸ್ಟಂ
(d) ಮೇಲಿನ ಎಲ್ಲವೂ

36. ಜಾರ್ಖಂಡಿನ ಜಡುಂಗ್ಡ ಗಣಿಯು ಯಾವುದಕ್ಕೆ ಪ್ರಸಿದ್ಧವಾಗಿದೆ?
(a) ಚಿನ್ನ
(b) ಕಬ್ಬಿಣದ ಅದಿರು
(c) ಮೈಕಾ
(d) ಯುರೇನಿಯಂ

37. IR20 ಮತ್ತು ರತ್ನಗಳು ಈ ಕೆಳಗಿನ ಯಾವುದರ ತಳಿಗಳಾಗಿವೆ?
(a) ಭತ್ತ
(b) ಜೋಳ
(c) ಬಾಜ್ರ
(d) ಗೋಧಿ

38. ಭಾರತದಲ್ಲಿ ಹಳದಿ ಕ್ರಾಂತಿ ಸಂಬಂಧಿಸಿರುವುದು
(a) ಟೀ ಉತ್ಪಾದನೆ
(b) ಎಣ್ಣೆ ಕಾಳುಗಳ ಉತ್ಪಾದನೆ
(c) ಭತ್ತದ ಉತ್ಪಾದನೆ
(d) ಬಾಳೆ ಹಣ್ಣಿನ ಉತ್ಪಾದನೆ

33. Computer's speed is measured in
(a) Seconds
(b) Minutes
(c) Clock cycles
(d) All of the above

34. Microsoft word is an example of
(a) An operating system
(b) Processing device
(c) Application software
(d) An input device

35. BIOS stands for
(a) Basic Input Output System
(b) Binary Input Output System
(c) Basic Input Off System
(d) All the above

36. Jadungda mines in Jharkand is famous for
(a) Gold
(b) Iron ore
(c) Mica
(d) Uranium

37. IR20 and Ratna are two important varities of
(a) Paddy
(b) Jowar
(c) Bajra
(d) Wheat

38. In India Yellow Revolution is associated with
(a) Production of tea
(b) Production of oil seeds
(c) Production of paddy
(d) Production of bananas



www.kpscvaani.com

39. ಬ್ರಿಟಿಷ್ ಆಡಳಿತದಲ್ಲಿ ಜಾಂಬಿಯಾ ಮತ್ತು ಜಿಂಬಾಬ್ವೆಗಳನ್ನು ಈ ಹೆಸರಿನಿಂದ ಕರೆಯುತ್ತಿದ್ದರು.

(a) ನೈರುತ್ಯ ಆಫ್ರಿಕಾ

(b) ಟ್ಯಾಂಜೇನಿಕಾ

(c) ರುಡೇಶಿಯಾ

(d) ನ್ಯಾಸಲ್ಯಾಂಡ್

40. ಕಾರಾಕೋರಂ ಹೆದ್ದಾರಿಯು ಯಾವ ಎರಡು ದೇಶಗಳನ್ನು ಸಂಪರ್ಕಿಸುತ್ತದೆ ?

(a) ಭಾರತ – ನೇಪಾಳ

(b) ಚೀನಾ – ಭಾರತ

(c) ಚೀನಾ – ಪಾಕಿಸ್ತಾನ

(d) ಭಾರತ – ಬಾಂಗ್ಲಾದೇಶ

41. ಪಾಲಿಮೆಟಾಲಿಕ್ ನಾಡ್ಯೂಲ್ (PMN) ದಲ್ಲಿ ಪ್ರಧಾನವಾಗಿ ಒಳಗೊಂಡಿರುವಂತಹದ್ದು

(a) ಕ್ಯಾಲ್ಸಿಯಂ

(b) ಮ್ಯಾಗ್ನಿಶಿಯಂ

(c) ಮ್ಯಾಂಗನೀಸ್

(d) ತಾಮ್ರ

42. ಆಳ ಸಮುದ್ರದಲ್ಲಿ ಮುಳುಗುಗಾರರು ಉಸಿರಾಡಲು ಬಳಸುವ ಮಿಶ್ರಣ

(a) ಆಮ್ಲಜನಕ ಮತ್ತು ಹೀಲಿಯಂ

(b) ಆಮ್ಲಜನಕ ಮತ್ತು ಜಲಜನಕ

(c) ಆಮ್ಲಜನಕ ಮತ್ತು ಕಾರ್ಬನ್ ಡೈ ಆಕ್ಸೈಡ್

(d) ಆಮ್ಲಜನಕ, ಹೀಲಿಯಂ ಮತ್ತು ಸಾರಜನಕ

43. ಕಾರ್ಬೋಹೈಡ್ರೇಟ್ ಹೊಂದಿರುವ ಜಲಜನಕ ಮತ್ತು ಆಮ್ಲಜನಕದ ಅಣುವಿನ ಅನುಪಾತ

(a) 1 : 2

(b) 1 : 1

(c) 1 : 4

(d) 2 : 3

39. What was the common name for Zambia and Zimbabwe when they were under British rule ?

(a) Southwest Africa

(b) Tanganyika

(c) Rhodesia

(d) Nyasaland

40. The Karakoram highway connects which of the following two countries ?

(a) India – Nepal

(b) China – India

(c) China – Pakistan

(d) India – Bangladesh

41. Polymetallic Nodules (PMN) predominantly contain

(a) Calcium

(b) Magnesium

(c) Manganese

(d) Copper

42. For respiration in deep sea, divers use mixture of

(a) Oxygen and Helium

(b) Oxygen and Hydrogen

(c) Oxygen and Carbon dioxide

(d) Oxygen, Helium and Nitrogen

43. A carbohydrate contains hydrogen and oxygen atom in the ratio of

(a) 1 : 2

(b) 1 : 1

(c) 1 : 4

(d) 2 : 3



www.kpscvaani.com

44. ಮುತ್ತು ಮುಖ್ಯವಾಗಿ ಈ ಕೆಳಕಂಡ ಯಾವುದರಿಂದ ಮಾಡಲ್ಪಟ್ಟಿದೆ ?

(a) ಪ್ರೋಟೀನ್

(b) ಕ್ಯಾಲ್ಸಿಯಂ ಕಾರ್ಬೋನೇಟ್

(c) ಸಿಲಿಕಾ

(d) ಸೋಡಿಯಂ ಕಾರ್ಬೋನೇಟ್

45. 4°C ದಲ್ಲಿ ನೀರಿನ ಗರಿಷ್ಠ ಮಟ್ಟವು

(a) ನಿರ್ದಿಷ್ಟ ಶಾಖ

(b) ಪರಿಮಾಣ

(c) ಸಾಂದ್ರತೆ

(d) ಆವಿಯ ಒತ್ತಡ

46. ಈ ಕೆಳಕಂಡವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಆಗಿದೆ ?

(a) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್ – ವಿಶಾಖಪಟ್ಟಣ

(b) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ – ಬೆಂಗಳೂರು

(c) ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ – ನವದೆಹಲಿ

(d) ಸೆಂಟ್ರಲ್ ಫುಡ್ ಟೆಕ್ನಾಲಾಜಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ – ಮೈಸೂರು

47. ಭಾರತದ ಮೊದಲ ಸೂಪರ್ ಕಂಪ್ಯೂಟರ್‌ನ ಹೆಸರು

(a) ಸಾಗಾ

(b) ಪರಮ್ 8000

(c) ಏಕಾ

(d) ಪರಂ ಯುವಾ

48. ಈ ಕೆಳಕಂಡವುಗಳಲ್ಲಿ ಭಾರತದಲ್ಲಿ ಮೊದಲ ಐ.ಐ.ಟಿ. ಯನ್ನು ಸ್ಥಾಪಿಸಲಾಗಿದೆ ?

(a) IIT ಬಾಂಬೆ

(b) IIT ಕಾನ್ಪುರ್

(c) IIT ಮದ್ರಾಸ್

(d) IIT ಖರಗ್‌ಪುರ್

44. Pearl is mainly made up of which among the following ?

(a) Protein

(b) Calcium carbonate

(c) Silica

(d) Sodium carbonate

45. At about 4°C, water has its maximum

(a) Specific heat

(b) Volume

(c) Density

(d) Vapour pressure

46. Which of the following is wrongly matched ?

(a) Indian Institute of Remote sensing - Vishakapatnam

(b) Indian Institute of Science - Bengaluru

(c) Indian Agricultural Research Institute IARI - New Delhi

(d) Central Food Technological Research Institute - Mysuru

47. India's first supercomputer is known as

(a) SAGA

(b) PARAM 8000

(c) EKA

(d) PARAM YUVA

48. Which among the following was the first IIT to be established in India ?

(a) IIT Bombay

(b) IIT Kanpur

(c) IIT Madras

(d) IIT Kharagpur



www.kpscvaani.com

49. ಭಾರತ ಮೂಲದ ಅಮೇರಿಕಾದ ವಿಜ್ಞಾನಿ ಹರ್ ಗೋಬಿಂದ ಖುರಾನರವರಿಗೆ ನೋಬೆಲ್ ಪ್ರಶಸ್ತಿಯನ್ನು ತಂದುಕೊಟ್ಟ ಕ್ಷೇತ್ರ

(a) ಭೌತಶಾಸ್ತ್ರ

(b) ಖಗೋಳಶಾಸ್ತ್ರ

(c) ತಳಿಶಾಸ್ತ್ರ

(d) ಗಣಿತಶಾಸ್ತ್ರ

50. "ನಗುವ ಬುದ್ಧ" ಎಂಬ ಹೆಸರಿನಲ್ಲಿ ಭಾರತದಲ್ಲಿ ಪ್ರಥಮ ಪರಮಾಣು ಪರೀಕ್ಷೆಯನ್ನು ನಡೆಸಿದ್ದು ಯಾವಾಗ ?

(a) 1973

(b) 1974

(c) 1988

(d) 1996

51. ಬ್ರಿಟಿಷರು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ನಿರ್ಮಾಣ ಮಾಡಿದ ಮೊದಲ ಕೋಟೆ ಯಾವುದು ?

(a) ಫೋರ್ಟ್ ವಿಲಿಯಂ

(b) ಫೋರ್ಟ್ ಸೈಂಟ್ ಜಾರ್ಜ್

(c) ಫೋರ್ಟ್ ಸೈಂಟ್ ಡೇವಿಡ್

(d) ಫೋರ್ಟ್ ಸೈಂಟ್ ಎಂಜೆಲೋ

52. ಕರ್ನಾಟಕದ ಶ್ರವಣಬೆಳಗೊಳ ಪಟ್ಟಣದಲ್ಲಿ ನಡೆದ ಮಹಾಮಸ್ತಕಾಭಿಷೇಕ ಕಾರ್ಯಕ್ರಮ ಸಂಬಂಧಿಸಿರುವುದು

(a) ಬುದ್ಧ

(b) ಮಹಾವೀರ

(c) ನಟರಾಜ

(d) ಬಾಹುಬಲಿ

53. 1954ರಲ್ಲಿ ಪಾಂಡಿಚೇರಿಯು ಸ್ವತಂತ್ರ್ಯವಾಗುವ ಮೊದಲು ಯಾವ ಯುರೋಪಿಯನ್ನರ ಅಧಿಕಾರವು ಅದನ್ನು ಆಕ್ರಮಿಸಿಕೊಂಡಿತ್ತು ?

(a) ಫ್ರೆಂಚರು

(b) ಇಂಗ್ಲೀಷರು

(c) ಡಚ್ಚರು

(d) ಪೋರ್ಚುಗೀಸರು

49. Indian - American scientist Har Gobind Khorana won nobel prize for his contribution in

(a) Physics

(b) Astronomy

(c) Genetics

(d) Mathematics

50. The first nuclear test conducted in India under the code name of Smilling Buddha in year

(a) 1973

(b) 1974

(c) 1988

(d) 1996

51. Which one of the following was the first fort constructed by the British in India ?

(a) Fort William

(b) Fort St. George

(c) Fort St. David

(d) Fort. St. Angelo

52. Mahamastakabhisheka ceremony held at Shravana Belagola town in Karnataka is associated with

(a) Buddha

(b) Mahaveer

(c) Natraja

(d) Bahubali

53. Which European power had occupied Pondichery, from which it gained independence in 1954 ?

(a) French

(b) English

(c) Dutch

(d) Portuguese



www.kpscvaani.com

54. ಈ ಕೆಳಕಂಡ ನಾಲ್ಕು ವೇದಗಳಲ್ಲಿ ಯಾವ ಒಂದು ವೇದವು ಮಾಂತ್ರಿಕ ಯಂತ್ರ ಮತ್ತು ಮಂತ್ರಗಳ ಬಗ್ಗೆ ಹೇಳುತ್ತದೆ ?

(a) ಋಗ್ವೇದ
(b) ಯಜುರ್‌ವೇದ
(c) ಅಥರ್ವವೇದ
(d) ಸಾಮವೇದ

55. ಔರಂಗಜೇಬನಿಂದ ಮರಣದಂಡನೆಗೆ ಒಳಗಾದ ಸಿಖ್ ಗುರು ಯಾರು ?

(a) ಹರ್ ರೈ
(b) ಹರ್ ಕಿಶನ್
(c) ಹರ್ ಗೋವಿಂದ
(d) ತೇಗ್ ಬಹದ್ದೂರ್

56. ಅಂತರರಾಷ್ಟ್ರೀಯ ಮಾದಕ ವ್ಯಸನ ವಿರೋಧಿ ದಿನ

(a) ಜುಲೈ 26
(b) ಜೂನ್ 26
(c) ಮೇ 26
(d) ಏಪ್ರಿಲ್ 26

57. ಸುಂದರ್ ಬನ್ಸ್ ರಾಷ್ಟ್ರೀಯ ಉದ್ಯಾನವನ ಯಾವ ರಾಜ್ಯದಲ್ಲಿದೆ?

(a) ಆಂಧ್ರ ಪ್ರದೇಶ
(b) ತಮಿಳುನಾಡು
(c) ಮಹಾರಾಷ್ಟ್ರ
(d) ಪಶ್ಚಿಮ ಬಂಗಾಳ

58. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಮೊದಲ ಮಹಿಳಾ ಅಧ್ಯಕ್ಷೆ ಯಾರು ?

(a) ಸರೋಜಿನಿ ನಾಯ್ಡು
(b) ಆ್ಯನಿ ಬೆಸೆಂಟ್
(c) ನಿಲೀ–ಶೇನ್‌ಗುಪ್ತ
(d) ಉಷಾ ಮೆಹ್ತಾ

54. Which one of the following four vedas contains an account of magical charms and spells ?

(a) Rig veda
(b) Yajur veda
(c) Atharva veda
(d) Samaveda

55. The Sikh Guru executed by Aurangzeb was

(a) Har Rai
(b) Har Kishan
(c) Har Govind
(d) Tegh Bahaddur

56. International Day against Drug Abuse is on

(a) 26th July
(b) 26th June
(c) 26th May
(d) 26th April

57. Sunderbans National Park is situated in which state ?

(a) Andhra Pradesh
(b) Tamil Nadu
(c) Maharashtra
(d) West Bengal

58. Who was the first woman President of the Indian National Congress ?

(a) Sarojini Naidu
(b) Annie Besant
(c) Nelie Sengupta
(d) Usha Mehta



www.kpscvaani.com

59. ಯಾವ ರಾಜ್ಯದ ಪೊಲೀಸ್ ಇಲಾಖೆಯು ಮೊಬೈಲ್ ಆಧಾರಿತ ಮ್ಯಾನೇಜರ್ ಅಪ್ಲಿಕೇಶನ್ ಆದ "ಕಾಪ್ ಕನೆಕ್ಟ್"ನ್ನು ಪ್ರಾರಂಭಿಸಿದ್ದು, ಇದು ಪೊಲೀಸ್ ಅಧಿಕಾರಿಗಳಿಗೆ ರಾಜ್ಯದ ನೈಜ ಮಾಹಿತಿಯನ್ನು ನೀಡುತ್ತದೆ?

(a) ಕರ್ನಾಟಕ

(b) ತಮಿಳುನಾಡು

(c) ಕೇರಳ

(d) ತೆಲಂಗಾಣ

60. ಭಾರತದ ಯಾವ ಸಶಸ್ತ್ರ ಪಡೆ 2018ರ ವರ್ಷವನ್ನು "ಕರ್ತವ್ಯ ನಿರ್ವಹಿಸುವಾಗ ಅಂಗ ವಿಕಲರಾದ ಸೈನಿಕರನ್ನು" ಸ್ಮರಿಸಲು ಬಳಸಿತು ?

(a) ಭಾರತದ ಭೂ ಸೇನೆ

(b) ಭಾರತದ ವಾಯುಸೇನೆ

(c) ಭಾರತದ ನೌಕಾಪಡೆ

(d) ಭಾರತದ ಕರಾವಳಿ ರಕ್ಷಣಾ ಪಡೆ

61. 2018 ರ ಮಹಿಳಾ ಸಿಂಗಲ್ ವಿಂಬಲ್ಡನ್ ಟೆನಿಸ್ ಟೂರ್ನಿಯ ವಿಜೇತರು

(a) ಮರಿಯಾ ಶರಪೋವ

(b) ಸೈಮನ್ ಹಲೆಪ್

(c) ಆಂಗ್ಲಿಕ್ ಕರಬೆರ್

(d) ಸೆರೆನಾ ವಿಲಿಯಂ

62. ಬನ್‌ಸಾಗರ್ ಕಾಲುವೆ ಯೋಜನೆಯು ಸುದ್ದಿಯಲ್ಲಿದ್ದು, ಈ ಕೆಳಕಂಡ ಯಾವ ರಾಜ್ಯಗಳ ಜಂಟಿ ಯೋಜನೆ ಆಗಿತ್ತು ?

(a) ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಬಿಹಾರ್

(b) ಗುಜರಾತ್, ರಾಜಸ್ಥಾನ್ ಮತ್ತು ಮಧ್ಯಪ್ರದೇಶ

(c) ರಾಜಸ್ಥಾನ್, ಉತ್ತರಪ್ರದೇಶ, ಬಿಹಾರ್

(d) ಮಧ್ಯಪ್ರದೇಶ, ರಾಜಸ್ಥಾನ್ ಮತ್ತು ಉತ್ತರಪ್ರದೇಶ

59. Which state police has launched a mobile based manager application "Cop Connect" to provide real time information to police officers across the state ?

(a) Karnataka

(b) Tamil Nadu

(c) Kerala

(d) Telangana

60. Which Indian Armed Force is observing the year 2018 as "Year of disabled soldiers in the line of duty" ?

(a) Indian Army

(b) Indian Air Force

(c) Indian Navy

(d) Indian Coast Guard

61. Who has won 2018 women's singles Wimbledon tennis tournament ?

(a) Maria Sharapova

(b) Simon Halep

(c) Angelique Kerber

(d) Serena William

62. The Bansagar Canal Project is in news. It is a joint venture of which of the following states ?

(a) Uttar Pradesh, Madhya Pradesh and Bihar

(b) Gujrat, Rajasthan and Madhya Pradesh

(c) Rajasthan, Uttar Pradesh, Bihar

(d) Madhya Pradesh, Rajasthan and Uttar Pradesh



www.kpscvaani.com

63. MI-5 ಯಾವ ರಾಷ್ಟ್ರದ ಗುಪ್ತಚರ ದಳವಾಗಿದೆ ?
(a) ಚೈನಾ
(b) ಆಸ್ಟ್ರೇಲಿಯಾ
(c) ಇಂಗ್ಲೆಂಡ್ (ಯು.ಕೆ.)
(d) ರಷ್ಯಾ

64. ಕರ್ನಾಟಕ ರಾಜ್ಯದ ಪ್ರಸಕ್ತ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಯಾರು ?
(a) ವಿಕ್ರಂಜಿತ್ ಸೇನ್
(b) ಪಿ. ಡಿ. ದಿನಕರನ್
(c) ದಿನೇಶ್ ಮಹೇಶ್ವರಿ
(d) ಸುಬ್ರೋ ಕಮಲ್ ಮುಖರ್ಜಿ

65. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 500 ಅಂತರರಾಷ್ಟ್ರೀಯ ಪಂದ್ಯಗಳ ಮೈಲುಗಲ್ಲನ್ನು ಮುಟ್ಟಿದ ಭಾರತದ ಮೂರನೇ ಕ್ರಿಕೆಟಿಗ ಯಾರು ?
(a) ಎಂ. ಎಸ್. ಧೋನಿ
(b) ವಿರಾಟ್ ಕೊಹ್ಲಿ
(c) ರೋಹಿತ್ ಶರ್ಮಾ
(d) ರವಿಚಂದ್ರನ್ ಅಶ್ವಿನ್

66. 8, 6, 9, 23, 87, ____________ ಮುಂದಿನ ಸರಣಿ ಸಂಖ್ಯೆ ಯಾವುದು ?
(a) 128
(b) 226
(c) 324
(d) 429

67. 4 ಜನ ಗಂಡಸರು, 6 ಜನ ಹೆಂಗಸರು ಹಾಗೂ 5 ಮಕ್ಕಳನ್ನು ಒಳಗೊಂಡ ಗುಂಪಿನಲ್ಲಿ, 2 ಜನ ಗಂಡಸರು, 3 ಜನ ಹೆಂಗಸರು ಹಾಗೂ 1 ಮಗುವಿನಂತೆ ಈ ಕೆಳಕಂಡ ಸಂಖ್ಯೆಗಳಲ್ಲಿ ಎಷ್ಟು ವಿಧವಾಗಿ ರಚನೆ ಮಾಡಬಹುದು ?
(a) 300
(b) 600
(c) 750
(d) 900

63. MI-5 in Intelligence agency of which country ?
(a) China
(b) Australia
(c) England (UK)
(d) Russia

64. Who is the present Chief Justice of High Court of Karnataka ?
(a) Vikramjit Sen
(b) P. D. Dinakaran
(c) Dinesh Maheshwari
(d) Subhro Kamal Mukherjee

65. Who has become the 3rd Indian cricketer to reach the counted milestones of playing 500 international matches ?
(a) M. S. Dhoni
(b) Virat Kohli
(c) Rohit Sharma
(d) Ravichandran Ashwin

66. 8, 6, 9, 23, 87, ____________. What comes next in the series ?
(a) 128
(b) 226
(c) 324
(d) 429

67. A group consists of 4 men, 6 women and 5 children. In how many ways can 2 men, 3 women and 1 child selected from the given group ?
(a) 300
(b) 600
(c) 750
(d) 900



www.kpscvaani.com

68. ಎಷ್ಟು ವಿಧದಲ್ಲಿ ನಾಲ್ಕು ಪುಸ್ತಕಗಳನ್ನು A, B, C, D ಯನ್ನು ಒಂದರ ಮೇಲೆ ಒಂದು ಲಂಬವಾಗಿ ಜೋಡಿಸಬಹುದು, ಇದರಲ್ಲಿ A ಮತ್ತು B ಪುಸ್ತಕಗಳು ನಿರಂತರ ಸ್ಥಾನದಲ್ಲಿ ಇರುವುದಿಲ್ಲ ?

(a) 9
(b) 12
(c) 14
(d) 18

69. 6 ಮುಖಗಳುಳ್ಳ 3 ದಾಳಗಳನ್ನು ಒಟ್ಟಿಗೆ ಹಾಕಿದರೆ 2 ದಾಳಗಳು ಒಂದೇ ಸಂಖ್ಯೆಯನ್ನು ತೋರಿಸದ ಸಂಭವನೀಯತೆ ಎಷ್ಟು ?

(a) $7/12$
(b) $5/9$
(c) $1/36$
(d) $5/12$

70. ಕಾರ್ಡುಗಳಿರುವ ಒಂದು ಪ್ಯಾಕ್‌ನಲ್ಲಿ ಎರಡು ಕಾರ್ಡುಗಳನ್ನು ಒಂದರ ನಂತರ ಒಂದರಂತೆ ಬದಲಾವಣೆಯ ಮೂಲಕ ತೆಗೆಯಲಾಯಿತು. ಅದರಲ್ಲಿ ಮೊದಲು ಕೆಂಪು ಬಣ್ಣದ ಕಾರ್ಡ್ ಮತ್ತು ಎರಡನೇಯದು ರಾಜ ಆಗಿರುವ ಸಂಭವನೀಯತೆಯು

(a) $1/26$
(b) $3/52$
(c) $15/26$
(d) $11/26$

71. LBAEHC ಇದರ ಸಂಕೇತವಾಗಿ BLEACH ನಮೂದಿಸಿದ್ದರೆ, NBOLZKMH ಈ ಕೆಳಕಂಡ ಯಾವುದರ ಸಂಕೇತವಾಗಿರುತ್ತದೆ ?

(a) OBNKZLHM
(b) LOBNHMKZ
(c) OCPMALNI
(d) BNLOKZHM

68. In how many different ways can four books A, B, C and D be arranged one above another in a vertical order such that the books A and B are never in continuous position ?

(a) 9
(b) 12
(c) 14
(d) 18

69. Three 6 faced dice are thrown together. The probability that no two dice show the same number on them is

(a) $7/12$
(b) $5/9$
(c) $1/36$
(d) $5/12$

70. From a pack of cards, two cards are drawn one after the other, with replacement. The probability that the first is a red card and the second is a king is

(a) $1/26$
(b) $3/52$
(c) $15/26$
(d) $11/26$

71. If LBAEHC is the code for BLEACH then which of the following is coded as NBOLZKMH ?

(a) OBNKZLHM
(b) LOBNHMKZ
(c) OCPMALNI
(d) BNLOKZHM



www.kpscvaani.com

72. 2010 ಜನವರಿ 1 ವಾರದ ದಿನ ಯಾವುದಾಗಿರುತ್ತದೆ ?
(a) ಶುಕ್ರವಾರ
(b) ಶನಿವಾರ
(c) ಭಾನುವಾರ
(d) ಸೋಮವಾರ

72. What day is 1st January 2010 ?
(a) Friday
(b) Saturday
(c) Sunday
(d) Monday

(**73-75**ರ ಪ್ರಶ್ನೆಗಳಿಗೆ ಈ ಕೆಳಗೆ ನೀಡಿರುವ ಮಾಹಿತಿಯನ್ನು ಅರ್ಥೈಸಿಕೊಂಡು, ಉತ್ತರಿಸಲು ಸೂಚಿಸಿದೆ)

A, B, C, D ಮತ್ತು Eರವರು ವಾರದಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ 5 ಆಟಗಳನ್ನು ಪ್ರದರ್ಶಿಸಿರುತ್ತಾರೆ. ಪ್ರತಿ ದಿನ ಒಂದು ಆಟ ಪ್ರದರ್ಶಿಸಲಾಗುತ್ತದೆ. D ಅಥವಾ E ಮೊದಲ ಮತ್ತು ಕೊನೆಯ ಆಟಗಳನ್ನು ಪ್ರದರ್ಶಿಸಬಾರದು. E ಕೂಡಲೇ Cಯನ್ನು ಅನುಕರಿಸಬೇಕು. B ಕೂಡಲೇ D ಪ್ರದರ್ಶಿಸಿದ ನಂತರ ಪ್ರದರ್ಶಿಸಬೇಕು. ಒಂದು ಆಟವು A ಮತ್ತು B ನ ನಡುವೆಯಿರಬೇಕು.

(Answer the Q. No. **73-75** by referring the information given below)

Five plays A, B, C, D and E are to be staged from Monday to Friday of a week. On each day, only one play will be staged. D or E should not be either the first or last to be staged. E should be immediately followed by C. B should be staged immediately after D. One play is staged between A and B.

73. ಯಾವುದು ಮೊದಲ ಆಟದ ಪ್ರದರ್ಶನವಾಗಿರಬೇಕು ?
(a) A
(b) B
(c) C
(d) ಯಾವುದನ್ನೂ ನಿರ್ಧರಿಸಲು ಆಗುವುದಿಲ್ಲ

73. Which is the first play to be staged ?
(a) A
(b) B
(c) C
(d) Cannot be determined

A D B E C

74. ಈ ಕೆಳಕಂಡ ಯಾವುದು ಸರಿಯಾದ ಆಟದ ಪ್ರದರ್ಶನದ ಅನುಕ್ರಮವಾಗಿರುತ್ತದೆ ?
(a) ADBCE
(b) AECDB
(c) BDAEC
(d) ADBEC

74. Which of the following is the correct sequence of staging all the plays ?
(a) ADBCE
(b) AECDB
(c) BDAEC
(d) ADBEC

75. ಯಾವ ಆಟವು ಬುಧವಾರದಂದು ಪ್ರದರ್ಶಿಸಲಾಯಿತು ?
(a) A
(b) B
(c) B ಅಥವಾ C ಎರಡರಲ್ಲಿ ಒಂದು
(d) ಯಾವುದನ್ನೂ ನಿರ್ಧರಿಸಲು ಸಾಧ್ಯವಿಲ್ಲ

75. Which play was staged on Wednesday ?
(a) A
(b) B
(c) Either B or C
(d) Cannot be determined



www.kpscvaani.com

76. 1 ಗಿಗಾ ಬೈಟ್ =

(a) 1024 ಬೈಟ್ಸ್

(b) 1024 × 1024 ಬೈಟ್ಸ್

(c) 2 ಬೈಟ್ಸ್

(d) 1024 × 1024 × 1024 ಬೈಟ್ಸ್

77. ಕಂಪ್ಯೂಟರ್‌ಗೆ ಸಂಬಂಧಿಸಿದಂತೆ USBಯ ವಿಸ್ತೃತ ರೂಪ

(a) ಯೂನಿವರ್ಸಲ್ ಸೀರಿಯಲ್ ಬಸ್

(b) ಯೂನಿವರ್ಸಿಟಿ ಸೈನ್ ಬಸ್

(c) ಯುನೈಟೆಡ್ ಸೈನ್ಸ್ ಬಸ್

(d) ಮೇಲಿನ ಯಾವುದೂ ಅಲ್ಲ

78. URL ಇದರ ವಿಸ್ತೃತ ರೂಪ

(a) ಯೂನಿಫಾರಂ ರಿಸರ್ಚ್ ಲಿಮಿಟೆಡ್

(b) ಯೂನಿಫಾರಂ ರಿಸೋರ್ಸ್ ಲೊಕೇಟರ್

(c) ಯೂನಿಲೈನ್ ರಿಸೋರ್ಸ್ ಲ್ಯಾಬ್ಸ್

(d) ಯೂನಿಫಾರಂ ರಿಸರ್ಚ್ ಲೊಕೇಟರ್

79. ರ್‍ಯಾಂಡಂ ಆಕ್ಸೆಸ್ ಮೆಮೊರಿ ಮತ್ತು ರೀಡ್ ಓನ್ಲಿ ಮೆಮೊರಿಗಳು ಇದಕ್ಕೆ ಉದಾಹರಣೆಯಾಗಿದೆ

(a) ಪ್ರಾಥಮಿಕ ದತ್ತಾಂಶ ಸಂಗ್ರಾಹಕ

(b) ದ್ವಿತೀಯ ದತ್ತಾಂಶ ಸಂಗ್ರಾಹಕ

(c) ಸಹಾಯಕ ದತ್ತಾಂಶ ಸಂಗ್ರಾಹಕ

(d) ಮೇಲಿನ ಯಾವುದೂ ಅಲ್ಲ

80. ಕಂಪ್ಯೂಟರ್ ಮತ್ತು ಕಂಪ್ಯೂಟರ್‌ನ ನೆಟ್‌ವರ್ಕ್‌ಗೆ ಈ ಕೆಳಗಿನ ಯಾವುದು ಬಾಹ್ಯವಾಗಿ ಬೆದರಿಕೆಯುಂಟುಮಾಡುವುದಿಲ್ಲ ?

(a) ನಿರ್ಲಕ್ಷ್ಯ

(b) ಟ್ರೋಜನ್ ಹಾರ್ಸ್

(c) ಆಡ್ವೇರ್

(d) ಕ್ರ್ಯಾಕರ್ಸ್

76. 1 Giga byte is equivalent to

(a) 1024 bytes

(b) 1024 × 1024 bytes

(c) 2 bytes

(d) 1024 × 1024 × 1024 bytes

77. A USB in computer terminology means

(a) Universal Serial Bus

(b) University Sign Bus

(c) United Science Bus

(d) None of the above

78. URL stands for

(a) Uniform Research Limited

(b) Uniform Resource Locator

(c) Uniline Resource Labs

(d) Uniform Research Locator

79. Random Access Memory and Read Only Memory are examples of

(a) Primary memory

(b) Secondary memory

(c) Auxiliary memory

(d) None of the above

RAM ROM

80. Which of the following is not an external threat to a computer or a computer network ?

(a) Ignorance

(b) Trojan horses

(c) Adware

(d) Crackers



www.kpscvaani.com

81. ಮಾಲ್‌ಶಿಯಸ್ ಸಾಫ್ಟ್‌ವೇರನ್ನು ಏನೆನ್ನುತ್ತಾರೆ?
(a) ಬ್ಯಾಡ್‌ವೇರ್
(b) ಮಾಲ್‌ವೇರ್
(c) ಮಾಲ್‌ಶಿಯಸ್‌ವೇರ್
(d) ಇಲ್ಲೀಗಲ್‌ವೇರ್

82. VoIP ವಿಸ್ತೃತ ರೂಪ
(a) ವಾಯ್ಸ್ ಓವರ್ ಐಪಿ
(b) ವೀಡಿಯೋ ಓವರ್ ಐಪಿ
(c) ವೈರಸ್ ಓವರ್ ಐಪಿ
(d) ವರ್ಚುವಲ್ ಓವರ್ ಐಪಿ

83. ________ ಎಂಬುದು ಎಲೆಕ್ಟ್ರಾನಿಕ್ ಟ್ರೆಸ್‌ಪಾಸಿಂಗ್ ಅಥವಾ ಕ್ರಿಮಿನಲ್ ಹ್ಯಾಕಿಂಗ್.
(a) ಕ್ರಾಕಿಂಗ್
(b) ಜಾಕಿಂಗ್
(c) ಸ್ಪೂಫಿಂಗ್
(d) ಸ್ಮಾರ್ಮಿಂಗ್

84. ಉದ್ದೇಶಪೂರ್ವಕವಾಗಿ ಹಾಳುಮಾಡಲ್ಪಟ್ಟ ಕಂಪ್ಯೂಟರ್ ಪ್ರೋಗ್ರಾಂಗೆ, ಒಂದು ಪ್ರೋಗ್ರಾಂನಿಂದ ಮತ್ತೊಂದು ಪ್ರೋಗ್ರಾಂಗೆ ಅಥವಾ ಒಂದು ಡಿಸ್ಕ್‌ನಿಂದ ಇನ್ನೊಂದು ಡಿಸ್ಕ್‌ಗೆ ಹರಡುವುದನ್ನು ಹೀಗೆಂದು ಕರೆಯುತ್ತಾರೆ
(a) ಟ್ರೋಜನ್ ಹಾರ್ಸ್
(b) ವೈರಸ್
(c) ಟೈಂ ಬಾಂಬ್
(d) ಯಾವುದೂ ಅಲ್ಲ

85. ಒಂದು ಪಿಕ್ಸೆಲ್ ಎಂಬುದು
(a) ಚಿತ್ರ ಬಿಡಿಸುವ ಒಂದು ಕಂಪ್ಯೂಟರ್ ಪ್ರೋಗ್ರಾಂ
(b) ದ್ವಿತೀಯ ದತ್ತಾಂಶ ಸಂಗ್ರಹಕದಲ್ಲಿ ಸಂಗ್ರಹಿಸಲ್ಪಟ್ಟ ಚಿತ್ರ
(c) ಚಿತ್ರದ ವಿಶ್ಲೇಷಿಸಬಹುದಾದ ಸಣ್ಣ ಭಾಗ
(d) ಮೇಲಿನ ಯಾವುದೂ ಅಲ್ಲ

81. Malicious software is known as
(a) Badware
(b) Malware
(c) Maliciousware
(d) Illegalware

82. VoIP stands for
(a) Voice over IP
(b) Video over IP
(c) Virus over IP
(d) Virtual over IP

83. ________ refers to electronic tresspassing or criminal hacking.
(a) Cracking
(b) Jacking
(c) Spoofing
(d) Smarming

84. An intentionally disruptive program that spreads from program to program or from disk to disk is known as
(a) Trojan horse
(b) Virus
(c) Time bomb
(d) None

85. A pixel is a
(a) Computer program that draws picture
(b) Picture stored in secondary memory
(c) The smallest resolvable part of a picture
(d) None of the above



www.kpscvaani.com

86. ಷಡ್ ದಶಮಾನ ಸಂಖ್ಯೆ $FADE_{(16)}$ ಗೆ ಸಮನಾದ ಅಷ್ಟಮಾನ ಸಂಖ್ಯೆ

(a) $176666_{(8)}$

(b) $174336_{(8)}$

(c) $175326_{(8)}$

(d) $175336_{(8)}$

87. ಅಷ್ಟಮಾನ ಸಂಖ್ಯೆ $274_{(8)}$ ಗೆ ಸಮನಾದ ಷಡ್ ದಶಮಾನ ಸಂಖ್ಯೆ

(a) $AB_{(16)}$

(b) $BC_{(16)}$

(c) $CD_{(16)}$

(d) $EF_{(16)}$

88. ವಿರುದ್ಧ ದಿಕ್ಕಿನಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ಎರಡು ಸಮಾಂತರ ತಂತಿಗಳು

(a) ಪರಸ್ಪರ ಆಕರ್ಷಿಸುತ್ತವೆ

(b) ಪರಸ್ಪರ ವಿಕರ್ಷಿಸುತ್ತವೆ

(c) ಯಾವುದೇ ಪರಿಣಾಮವನ್ನುಂಟುಮಾಡುವುದಿಲ್ಲ

(d) ಪರಸ್ಪರ ಲಂಬವಾಗಿ ಚಲಿಸುತ್ತವೆ

89. ಎಲೆಕ್ಟ್ರಿಕ್ ಫ್ಯೂಸ್ ಕಾರ್ಯ ನಿರ್ವಹಿಸುವ ವೈಜ್ಞಾನಿಕ ತತ್ವ

(a) ವಿದ್ಯುತ್ ಪ್ರವಾಹದ ಶಾಖೋತ್ಪನ್ನ ಪರಿಣಾಮ

(b) ವಿದ್ಯುತ್ ಪ್ರವಾಹದ ರಾಸಾಯನಿಕ ಪರಿಣಾಮ

(c) ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮ

(d) ಮೇಲಿನ ಯಾವುದೂ ಅಲ್ಲ

90. ಗ್ಯಾಲ್ವೆನೋಮೀಟರ್ ________ ಅಳೆಯುವ ಸಾಧನ.

(a) ವಿಭವಾಂತರ

(b) ವಿದ್ಯುತ್ ಪ್ರವಾಹದ ದಿಕ್ಕು

(c) ವಿದ್ಯುತ್ ಪ್ರವಾಹದ ಪ್ರಮಾಣ

(d) ವಿದ್ಯುತ್ ಪ್ರವಾಹದ ಸಾಮರ್ಥ್ಯ

86. The octal equivalent of hexa decimal number $FADE_{(16)}$ is

(a) $176666_{(8)}$

(b) $174336_{(8)}$

(c) $175326_{(8)}$

(d) $175336_{(8)}$

87. The hexa decimal equivalent of octal number $274_{(8)}$ is

(a) $AB_{(16)}$

(b) $BC_{(16)}$

(c) $CD_{(16)}$

(d) $EF_{(16)}$

88. Two free parallel wires carrying currents in opposite directions

(a) Attract each other

(b) Repel each other

(c) Do not effect each other

(d) Move perpendicular to each other

89. An electric fuse is based on

(a) The heating effect of the current

(b) The chemical effect of the current

(c) The magnetic effect of the current

(d) None of these

90. A galvanometer is used to

(a) Measure potential difference

(b) Detect direction of current

(c) Measure the amount of current flowing

(d) Measure electric power of the circuit



www.kpscvaani.com

91. ಈ ಕೆಳಕಂಡ ರಿಟ್ ಅರ್ಜಿಯು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ

(a) ಸರ್ಷಿಯಾರರಿ

(b) ಕೋ-ವಾರಂಟೋ

(c) ಹೇಬಿಯಸ್ ಕಾರ್ಪಸ್

(d) ಮ್ಯಾಂಡಮಸ್

92. ಈ ಕೆಳಕಂಡವುಗಳಲ್ಲಿ ಯಾವುದು ಸಂವಿಧಾನದ ಪೀಠಿಕೆಯ ಭಾಗವಾಗಿರುವುದಿಲ್ಲ?

(a) ಸಾರ್ವಭೌಮತ್ವ

(b) ಸಮಾಜವಾದ

(c) ಜಾತ್ಯತೀತತೆ

(d) ಒಕ್ಕೂಟ

93. ಭಾರತ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಎಷ್ಟು ಭಾಷೆಗಳನ್ನು ಸೇರಿಸಲಾಗಿದೆ?

(a) 18

(b) 14

(c) 22

(d) 15

94. ಭಾರತ ಸಂವಿಧಾನದಲ್ಲಿ ಗಂಡು-ಹೆಣ್ಣು ಇಬ್ಬರಿಗೂ ಸಮಾನ ಕೆಲಸ, ಸಮಾನ ವೇತನ ಎಂದು ಎಲ್ಲಿ ನಮೂದಿಸಲಾಗಿದೆ?

(a) ಮೂಲಭೂತ ಹಕ್ಕುಗಳು

(b) ರಾಜ್ಯನೀತಿ ನಿರ್ದೇಶಕ ತತ್ವಗಳು

(c) ಮೂಲಭೂತ ಕರ್ತವ್ಯಗಳು

(d) ಸಂವಿಧಾನದ ಪೀಠಿಕೆಯ ಮಾರ್ಗದರ್ಶನದಲ್ಲಿ

95. ಕರ್ನಾಟಕವು ಎಷ್ಟು ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ?

(a) 24

(b) 26

(c) 28

(d) 30

91. Which of the following Writs stand for individual freedom ?

(a) Certiorari

(b) Quo-Warranto

(c) Habeas Corpus

(d) Mandamus

92. Which among the following, does not form part of the Preamble ?

(a) Sovereignty

(b) Socialism

(c) Secularism

(d) Federalism

93. How many languages have been listed in the 8th Schedule of the Constitution of India ?

(a) 18

(b) 14

(c) 22

(d) 15

94. Equal pay for equal work for both men and women has been laid down in the Indian Constitution as one of the

(a) Fundamental Rights

(b) Directive Principles of State Policy

(c) Fundamental Duties

(d) Guidelines in the Preamble

95. How many Lok Sabha Constituences are there in Karnataka ?

(a) 24

(b) 26

(c) 28

(d) 30



www.kpscvaani.com

96. ಅನಿಮೋಫಿಲಿ ಇದು ಯಾವುದರ ಪರಾಗ ಸ್ಪರ್ಶ ?
(a) ಪಕ್ಷಿಗಳು
(b) ಗಾಳಿ
(c) ಇರುವೆಗಳು
(d) ಬಾವಲಿಗಳು

97. ಅರಿಶಿನವು ಈ ಕೆಳಕಂಡ ಸಸ್ಯ ಪ್ರಭೇದಕ್ಕೆ ಸೇರಿದೆ ?
(a) ಮೂಲಂಗಿ
(b) ಶುಂಠಿ
(c) ಈರುಳ್ಳಿ
(d) ಲವಂಗ

98. ಜೀವಕೋಶಗಳ ಹಾಗೂ ಜೀವಂತ ಅಂಗಾಂಶಗಳ ಅಕಾಲಿಕ ಸಾವಿಗೆ ಸರಿಯಾದ ಹೆಸರೇನು ?
(a) ನ್ಯೂಟ್ರೋಫಿಲಿಯಾ
(b) ನೆಕ್ರೋಸಿಸ್
(c) ನಿಯೋಪ್ಲಾಜಿಯಾ
(d) ನೆಫ್ರೋಸಿಸ್

99. ಮಾನವನ ದೇಹದ ಯಾವ ಭಾಗದಲ್ಲಿ "ಪ್ಲೂರಾ" ಕಂಡು ಬರುತ್ತದೆ ?
(a) ಶ್ವಾಸಕೋಶ
(b) ಮೆದುಳು
(c) ಯಕೃತ್
(d) ಹೃದಯ

100. ಸಸ್ಯಕೋಶಗಳು, ಪ್ರಾಣಿಕೋಶಕ್ಕಿಂತ ವಿಭಿನ್ನವಾಗಿ ಹೊಂದಿರುವಂತಹದ್ದು
(a) ಕೋಶಗೋಡೆ
(b) ರೈಬೋಸೋಮ್ಸ್
(c) ಗಾಲ್ಗಿಸಂಕೀರ್ಣ
(d) ಪ್ಲಾಸ್ಮಾ ಹೊರ ಪದರ

96. Anemophily is pollination by
(a) Birds
(b) Wind
(c) Ants
(d) Bats

97. Turmeric belongs to from which of the following family of plants ?
(a) Radish
(b) Ginger
(c) Onion
(d) Clove

98. What is the correct name of premature death of cells and living tissues ?
(a) Neutrophilia
(b) Necrosis
(c) Neoplasia
(d) Nephrosis

99. In which part of the human body, "Pleura" is found ?
(a) Lungs
(b) Brain
(c) Liver
(d) Heart

100. Plant cell differ from animal cell in having
(a) Cell wall
(b) Ribosomes
(c) Golgi complex
(d) Plasma membrane



www.kpscvaani.com